

## ಮುಗಿಲೆತ್ತರದ ಕಬ್ಬು!

ಕಬ್ಬು, ಕಬ್ಬಿನ ಬೆಲ್ಲ, ಕಬ್ಬಿನ ಹಾಲು, ಕಬ್ಬಿನ ತೊಡೆದೇವು ಯಾರಿಗೆ ತಾನೇ ಇಷ್ಟವಿಲ್ಲ ಹೇಳಿ. ಇಂತಹ ಕಬ್ಬು ಸಾಮಾನ್ಯವಾಗಿ 10ರಿಂದ 15 ಅಡಿ ಎತ್ತರವಷ್ಟೇ ಬೆಳೆಯುತ್ತದೆ. ಆದರೆ ಇಲ್ಲೊಂದು ಕಬ್ಬು ಮುಗಿಲೆತ್ತರಕ್ಕೆ ಬೆಳೆದು ನಿಂತು ಎಲ್ಲರೂ ಆಶ್ಚರ್ಯಪಡುವಂತೆ ಮಾಡಿದೆ.

ಶಿರಸಿಯ ವರ್ಗಾಸುರದ ಗಣೇಶ ಹೆಗಡೆ ಮನೆಯ ಹಿತ್ತಲಲ್ಲಿ ಕಬ್ಬು ಸರಿ ಸುಮಾರು 24 ಅಡಿ ಅಷ್ಟು ಎತ್ತರಕ್ಕೆ ಬೆಳೆದಿದೆ. ಗಣೇಶ ಹೆಗಡೆ ಅವರ ಅಜ್ಜನವರು 5 ವರ್ಷದ ಹಿಂದೆ ಹಿತ್ತಲಲ್ಲಿ ಈ ಕಬ್ಬನ್ನು ಬೆಳೆಸಿದರು. ಆದರೆ, ಅದು ಇಷ್ಟು ಎತ್ತರಕ್ಕೆ ಬೆಳೆಯುತ್ತದೆ ಅಂತ ಅವರು ಕನಸೂ ಕಂಡಿರಲಿಲ್ಲ. ಸಹಜವಾಗಿ ಎಲ್ಲ ರೀತಿಯ ಕಬ್ಬು ಬೆಳೆಯುವಂತೆಯೇ ದಿನಾಲು ನೀರು, ನಿಯಮಿತವಾಗಿ ಗೊಬ್ಬರವನ್ನು ಈ ಕಬ್ಬಿಗೂ ಹಾಕುತ್ತಿದ್ದರಂತೆ. ಎತ್ತರ ಬೆಳೆದ ಕಬ್ಬು ನೆಲಕ್ಕುರುಳದಂತೆ ತಡೆಯಲು ಬಿದಿರಿನ ಬಂಬುವನ್ನು ಊರುಗೋಲಾಗಿ ಇಟ್ಟಿದ್ದಾರೆ. ಕಬ್ಬು ಬೆಳೆದು ನಿಂತಿರುವ ಪರಿಯನ್ನು ನೋಡಬೇಕೆಂದರೆ ತಲೆಯನ್ನು ಆಗಸದತ್ತ ಎತ್ತಲೇಬೇಕು.

–ಆದರ್ಶ ಪೈ, ಶಿರಸಿ



## ಕಸದಿಂದ ಕೈ ತೋಟ!

ನನ್ನ ಮಡದಿ ಸಂಧ್ಯಾ ಗೃಹಿಣಿ. ಮನೆವಾರ್ತೆಯ ಕಾರ್ಯಗಳ ಬಳಿಕ ಮಿಗುವ ಸಮಯವನ್ನು ಕರಕುಶಲತೆಯೊಂದಿಗೆ ಕೈ ತೋಟ ಬೆಳೆಸಲು ಉಪಯೋಗಿಸುವುದು ಅವಳ ಹವ್ಯಾಸ. ಮುಂಬೈ ಪಟ್ಟಣದ ನಮ್ಮ ಫ್ಲಾಟ್‌ನಲ್ಲಿ ಲಭ್ಯವಿರುವ ಸುಮಾರು 40–50 ಚದರಡಿ ಜಾಗದಲ್ಲೇ ನೈಸರ್ಗಿಕ ಹಾಗೂ ಕೃತಕ ಪ್ಯಾಕೇಜಿಂಗ್ ವಸ್ತುಗಳನ್ನು ಬಳಸಿ ಕೈತೋಟ ನಿರ್ಮಿಸಿದ್ದಾಳೆ. ಅತಿಥಿಗಳ ಜೊತೆಗೆ ಮನೆವಾಸಿಗಳಾದ ನಮ್ಮ ಮನವನ್ನೂ ಈ ಕೈತೋಟವು ಸೆಳೆಯುತ್ತದೆ.

ಖಾಲಿಯಾದ ತುಪ್ಪದ ಪುಟ್ಟ ಪ್ಲಾಸ್ಟಿಕ್ ಕರಂಡಿಗೆಗಳು, ತೆಂಗಿನ ಕಾಯಿಯ ಗೆರಟೆಗಳು, ಹಾಳಾದ ವಿದ್ಯುತ್ ಝೂಮರ್‌ಗಳ ಬಿಡಿ ಭಾಗಗಳು, ಐಸ್ ಕೇಕಿನ ಥರ್ಮೋಕೋಲ್ ಕಂಟೈನರ್, ಕೊರೊನಾ ಕಾಲದಲ್ಲಿ ಹಾಳಾದ ಸ್ಟೀಮ್ ವೇಪರೈಸರ್, ಬಾಗಿಲಿಗೆ ಹಾಕಿದ್ದ ಸಮುದ್ರ ಚಿಪ್ಪಿನ ಮಾಲೆಯ ಹಳೆಯ ಚಿಪ್ಪುಗಳ ರಾಶಿ ಇತ್ಯಾದಿ ಕಚ್ಚಾವಸ್ತುಗಳು ಇವಳ ಕೈತೋಟದ ಸುಂದರವಾಗಿ ರೂಪುಗೊಂಡಿವೆ. ಕೆಲವು ಮಣ್ಣಿನ ಕುಂಡಗಳ ಹೊರತು ಇತರ ಯಾವುದನ್ನೂ ಪ್ರತ್ಯೇಕ ಹಣ ತೆತ್ತು ಖರೀದಿಸದಿರುವುದು ವಿಶೇಷ.

ಇಷ್ಟೇ ಅಲ್ಲದೆ ಒಡೆದ ಮೊಟ್ಟೆಯ ಚಿಪ್ಪಿನ ಮೇಲ್ಮೈಗೆ ಬಣ್ಣ ಹಚ್ಚಿ ಅಲಂಕಾರಿಕವಾಗಿ ಗಿಡಗಳ ಮಧ್ಯೆ ತೂಗು ಹಾಕಿದ್ದಾಳೆ. ಹಳೆಯ ಬಟ್ಟೆಗಳನ್ನು ಕಲಾತ್ಮಕವಾಗಿ ನೇಯ್ದು ಗಿಡಗಳನ್ನು ನೇತಾಡಿಸುವ ಹಗ್ಗವಾಗಿಸಿದ್ದಾಳೆ!

–ರಮಣ್ ಶೆಟ್ಟಿ ರೆಂಜಾಳ್, ಮುಂಬಯಿ

## ಮೈಸೂರಿನ ಸಬರಮತಿ ಆಶ್ರಮ

ಮೈಸೂರಿನ ಹೆಮ್ಮೆಯ 'ಮಾನಸ ಗಂಗೋತ್ರಿ' ಆವರಣದಲ್ಲಿನ 'ಗಾಂಧಿ ಅಧ್ಯಯನ ಸಂಸ್ಥೆ'ಯ ಬಗ್ಗೆ ಒಂದಿಷ್ಟು ಹೇಳಲೇಬೇಕು! ದಟ್ಟ ಹಸಿರು ಸಿರಿಯ ನಡುವೆ ಪ್ರಶಾಂತ ವಾತಾವರಣದಲ್ಲಿ ರೂಪುಗೊಂಡಿರುವ ಇಲ್ಲಿನ ಗಾಂಧಿ ಭವನದ ಸುತ್ತಮುತ್ತ ವಿಶಾಲ ಆವರಣದಲ್ಲಿ ಗಾಂಧೀಜಿ, ಕಸ್ತೂರಿ ಬಾ ಮುಂತಾದವರ ಪ್ರತಿಕೃತಿಗಳು ಇಂತಿವೆ! ಇವೆಲ್ಲವೂ ಗಾಢ ನೀಲಿ ಮತ್ತು ಕಪ್ಪು ಬಣ್ಣದ ಆಳೆತ್ತರದ ಸಿಮೆಂಟ್ ಶಿಲ್ಪ ಕಲಾಕೃತಿಗಳು.

ಬಾಲ ಗಾಂಧಿ, ಧ್ಯಾನ ಮುದ್ರೆಯಲ್ಲಿ ಕುಳಿತ ಗಾಂಧಿ, ದಂಡಿ ಸತ್ಯಾಗ್ರಹದಲ್ಲಿ ಗಾಂಧಿ, ಲಾಲ್ ಬಹದ್ದೂರ್ ಶಾಸ್ತ್ರಿ ಜೊತೆ ಗಾಂಧಿ. ಹೀಗೆ ಗಾಂಧೀಜಿಯವರ ಜೀವನ ಮತ್ತು ಸಂದೇಶವನ್ನು ಸಾರುವ ವಿವಿಧ ಭಂಗಿಗಳ ಸುಮಾರು 25ಕ್ಕೂ ಕಲಾಕೃತಿಗಳು ಇಲ್ಲಿವೆ. ಇದೆಲ್ಲದರ ಕಾರಣಕ್ಕೆ ಈ ಸ್ಥಳವನ್ನು 'ದಕ್ಷಿಣ ಭಾರತದ ಸಬರಮತಿ ಆಶ್ರಮ' ಎನ್ನಲು ತುಂಬಾ ಹೆಮ್ಮೆ ಎನಿಸುತ್ತದೆ!

–ಆರ್. ವೀರೇಶ್ ಕುಮಾರ್, ಬೆಂಗಳೂರು

